# ಕಲ್ಪನೆ ಕಾವ್ಯ

## ಹೊಟ್ಟೆಪಾಡು

ಬಣ್ಣ, ಸುಣ್ಣ, ಮಣ್ಣು, ಕಲ್ಲು, ಚಿನ್ನ
ಯಾವುದರಲ್ಲೂ ಮೂಡಬಹುದು ಕಲ್ಪನೆ!

ಜಗದ ಚೆಲುವ ತೃಣಮಾತ್ರವ
ಮೂಸೆಯಲ್ಲಿರಿಸಿ
ಎರಕ ಹೊಯ್ಯುತ್ತಾಳೆ, ಪೂಜೆಗಲ್ಲ
ಹೊಟ್ಟೆಪಾಡಿಗೆಂದು

ಕಮಲನಾಭನೊ ನಳಿನಮುಖಿಯೊ
ಜಲಜನೇತ್ರೆಯೊ ಪನ್ನಗಧರನೋ
ಪದ್ಮಪಾಣಿಯೋ
ಅಂಬುಜ ಹಸ್ತವೋ ಎಲ್ಲವೂ ಸೌಂದರ್ಯ ಸಿರಿಯೇ
ಕೊಂಡವರಲ್ಲಿ ಚಿಮ್ಮಬೇಕು ಭಕ್ತಿಯ ಚಿಲುಮೆ
ಆಗಲೇ ಹೆಚ್ಚುವುದು ದುಡಿಮೆ

ನೂರಾರು ದೇವತೆಗಳ ಸೃಷ್ಟಿಕರ್ತೆಗೆ
ಅರ್ಚಿಸಿ ಒಲಿಸುವ ಕಾಮನೆಯೇಕೆ?
ತನ್ನದು ಬರೀ ಹೊಟ್ಟೆಪಾಡಿನ
ನಿರಂತರ ದುಡಿಮೆ
ಆದರೆ ನಗುವಾಗ ಯಾವ ಸುಖಕ್ಕೆ ಕಡಿಮೆ?
ಭಾರವಾದೀತೇ ಬದುಕು ಬಣ್ಣವಿರುವ ಹಗಲಿಗೆ
ನಿಚ್ಚಣಿಕೆ ಇದೆಯಾದರೂ ಎಲ್ಲಿ
ಬೇರೆ ಬೇಡಿಕೆಗಳ ಕನಸಿಗೆ?

**ಶಿವದೇವಿ ಅವನೀಶಚಂದ್ರ**

## ಭಕ್ತಿಭಾವ

ಭಾವಗಳು ಬದಲಾಗಿ
ಬಣ್ಣಗಳು ಬರಿದಾಯ್ತು
ಬಂಧಗಳು ಬಿಗಿಯಾಗಿ
ಬಿಗುಮಾನ ಬೇರೂರಿತು
ಬೇಸರವು ಬಯಲಾಗಿ
ಬಿಕ್ಕುವಂತೆ ಭಾಸವಾಯ್ತು

ಬಿರುಗಾಳಿ ಬೀಸಿದಂತೆ
ಭಾವನೆಯು ಬಳಲಿತು
ಬಿಸಿಲ ಬೇಗೆಗೆ ಬಾಯಾರಿ
ಬರಗಾಲ ಬಂದಂತಾಯ್ತು
ಬವಣೆಯ ಬೇಲಿಯಿಂದ
ಬಸವಳಿದು
ಬಿಡುಗಡೆಯ ಬಯಸಿತು

ಬರಡು ಭೂಮಿಯು
ಬೆಳಗಾಗಿ ಬೇಡುತಾ
ಭಕ್ತಿಯ ಭಾವವ ಬಿತ್ತಿತು.

ಬೊಗಸೆಯಲ್ಲಿ ಬಯಕೆಗಳು
ಬತ್ತಿದರೂ ಬೆಂಗಾವಲಾಗಿ
ಭವಿಷ್ಯ ಬರೆದ
ಭಗವಂತನಿರುವಾಗ ಭಾಗಶಃ
ಭರವಸೆಯ ಬೆಳಕು ಬೀರಿತು

**ನಂದಿನಿ, ನಕ್ಕರಿಕೆ**

